ಗ್ರಾಮೀಣ ನೇಕಾರರ ಸಂಕಷ್ಟವನ್ನು ಇನ್ನಾದರೂ ಮನಗಂಡು ಮುಂಬರುವ ದಸರಾ, ದೀಪಾವಳಿ, ಪೊಂಗಲ್, ಯುಗಾದಿ ಇತ್ಯಾದಿ ಹಬ್ಬಗಳ ಸಂಬಂಧ ರಿಬೇಟು ನೀಡುವ ಅವಧಿಯನ್ನು ಸರಕಾರ ಮುಂಚಿತವಾಗಿ ಸುತ್ತೋಲೆ ಕಳುಹಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಕೈ ಮಗ್ಗ ನೇಕಾರರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಕೈಮಗ್ಗ ಬಟ್ಟೆಗಳ ಮಾರಾಟದ ಮೇಲೆ ಶೇಕಡ ೨೦ರಷ್ಟು ರಿಬೇಟ್ ಪ್ರತಿ ವರ್ಷವು ನೀಡುತ್ತಿರುವುದು ನಿಜ. ಈ ಉದ್ಯೋಗಕ್ಕೆ ಸರ್ಕಾರವು ಸಕಲ ರೀತಿಯಿಂದ ಪ್ರೋತ್ಸಾಹ ಕೊಟ್ಟು ಪೋಷಿಸುತ್ತಾ ಬಂದಿದೆ. ಕೈಮಗ್ಗದ ಬಟ್ಟೆಗಳ ಮಾರಾಟದ ಮೇಲೆ ಕೊಡುವ ರಿಬೇಟನ್ನು ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಶೇಕಡ ೫೦ರಂತೆ ಭರಿಸುತ್ತಿವೆ. ಆದರೆ ೧೯೬೭–೮೮ನೇ ಸಾಲಿಗೆ ಕೇಂದ್ರ ಸರ್ಕಾರವು ವಿಶೇಷ ರಿಯಾಯಿತಿಯನ್ನು ಘೋಷಿಸಿರುವುದು ಈ ಸರ್ಕಾರಕ್ಕೆ ಇನ್ನೂ ತಲುಪಿಲ್ಲ.

ಮೇಲೆ ತಿಳಿಸಿದ ಕಾರಣದಿಂದ ಸಹಕಾರ ಸಂಘಗಳಿಗೂ ಕೂಡ ೭ ದಿನಗಳ ಕೈಮಗ್ಗ ಬಟ್ಟೆಗಳ ಮಾರಾಟದ ಮೇಲೆ ಶೇಕಡ ೨೦ರಷ್ಟು ರಿಯಾಯಿತಿಯನ್ನು ನೀಡಲು ಆದೇಶವನ್ನು ದಿನಾಂಕ ೨೨-೮-೧೯೬೭ರಲ್ಲಿ ಹೊರಡಿಸಲಾಯಿತು. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ನೇಕಾರರ ಸಹಕಾರ ಸಂಘಗಳಿಗೆ ಈ ಆದೇಶವು ತಲುಪಲು ನಿಧಾನವಾಗಿರಬಹುದು. ಈ ರೀತಿಯ ರಿಬೇಟನ್ನು ಮುಂದೆ ಸರ್ಕಾರ ನೀಡುವ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಎಚ್ಚರಿಕೆ ವಹಿಸಲಾಗುವುದು.

೮) ಮಂಗಳೂರಿನಿಂದ ಬೆಂಗಳೂರಿಗೆ ಹಗಲು ಸಮಯದಲ್ಲಿ ಸುಖಾಸೀನ ಬಸ ಸೌಕರ್ಯವನ್ನು ಒದಗಿಸುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಬೆಂಗಳೂರಿಗೆ ಸಾಕಷ್ಟು ಜನ ಪ್ರಯಾಣಿಕರು ಪ್ರತಿದಿನ ಪ್ರಯಾಣ ಮಾಡುತ್ತಾರೆ. ಈಗ ರಾತ್ರಿವೇಳೆ ಲಕ್ಸುರಿ ಸೆಮಿಲಕ್ಸುರಿ ಸಾಕಷ್ಟು ಇದೆ. ಆದರೆ ಹಗಲು ಹೊತ್ತಿನಲ್ಲಿ ಲಕ್ಸುರಿ ಬಸ್ಸುಗಳು ಸಾಕಷ್ಟು ಇಲ್ಲ. ಇದರಿಂದ ಪ್ರಯಾಣಿಕರಿಗೆ ಇನ್ನೊಂದು ಹೆಚ್ಚಿಗೆ ಲಕ್ಸುರಿ ಬಸ್ಸು ಮಂಗಳೂರು ಬೆಂಗಳೂರಿಗೆ ಶಿಫಾರಸ್ಸು ಮಾಡಬೇಕು. ಅದಲ್ಲದೆ ಮಂಗಳೂರು ಬಸ್ ನಿಲ್ದಾಣಕ್ಕೆ ಶಾಸಕರು ಸೀಟು ಕಾದಿರಿಸಲು ಫೋನ್ ಮಾಡಿದರೆ ಅಲ್ಲಿನ ಸಿಬ್ಬಂದಿಯವರು ಅಲಕ್ಷ್ಯ ತೋರಿಸುತ್ತಾರೆ. ಸೀಟುಗಳೆಲ್ಲಾ ಬುಕ್ ಆಗಿವೆ ಎಂದು ಸರಿಯಾಗಿ ನಿಗಾ ಕೊಡದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಈ ಕುರಿತು ನಾನು ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಸದಸ್ಯರ ಸಲಹೆ ಚೆನ್ನಾಗಿದೆ. ಇದು ಸಾಧ್ಯವೇ ಎನ್ನುವುದನ್ನು ನಾನು ಮಾನ್ಯ ಸಾರಿಗೆ ಮಂತ್ರಿಗಳಿಗೆ ಹೇಳಿ ಸಾಧ್ಯವಾದರೆ ಇನ್ನೂ ಒಂದು ಬಸ್ ಅನ್ನು ಹೆಚ್ಚಿಗೆ ಹಾಕಿಸುವುದಕ್ಕೆ ಪ್ರಯತ್ನಿಸುತ್ತೇನೆ ಎಂದು ಅವರ ಪರವಾಗಿ ನಾನು ಹೇಳುತ್ತೇನೆ.

೯) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಂಗ್ಲ ಮಾಧ್ಯಮಿಕ ೮ನೇ ತರಗತಿಗಳನ್ನು ನಡೆಸಲು ಅನುಮತಿ ಇಲ್ಲದೆ ಇರುವುದು.

ಶ್ರೀ ವಸಂತ ವಿ. ಸಾಲಿಯಾನ್.- ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಂಗ್ಲ ಮಾಧ್ಯಮವಿರತಕ್ಕ ಶಾಲೆಗಳಲ್ಲಿ ತರಗತಿಗಳನ್ನು ನಡೆಸಲು ೭ನೇ ತರಗತಿಯವರೆಗೆ ಅನುಮತಿ ನೀಡಿದ್ದು ಎಂಟನೇ ತರಗತಿಗೆ ಅನುಮತಿ ತೋರಿದ್ದಾಗ್ಯೂ ಇನ್ನೂ ನೀಡದಿರುವುದರಿಂದಾಗಿ ಸುಮಾರು ಮೂರು ತಿಂಗಳಿನಿಂದಲೂ ಅನುಮತಿ ಇಲ್ಲದೇ ೮ನೇ ತರಗತಿಯನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರುವಂತೆ ಆಗಲು ಕೂಡಲೇ ಅನುಮತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸುವಂತೆ ನಾನು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—ಸರ್ಕಾರವು ೧೯೬೭–೮೮ನೇ ಸಾಲಿನಲ್ಲಿ ಯಾವುದೇ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳನ್ನು ತೆರೆಯಲು ಪಾಂಜೂರಾತಿ ನೀಡಬಾರದೆಂಬ ಒಂದು ನಿರ್ಧಾರವನ್ನು ಕೈಗೊಂಡು, ಭಾಷಾ ಅಲ್ಪ ಸಂಖ್ಯಾತ ಆಡಳಿತ ಸಂಸ್ಥೆಗಳಿಂದ ನಡೆಸಲ್ಪಡುವ ಪ್ರಸ್ತಾವನೆಗಳನ್ನು ಮಾತ್ರ ಪರಿಶೀಲಿಸಿ ಅವಶ್ಯಕತೆಯ ಮೇರೆಗೆ ಪರಿಗಣಿಸಲು ನಿರ್ಧರಿಸಿದೆ.